ಕರ್ನಾಟಕ ಸರಕಾರ

ಆಯುಕ್ತರು, ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟೆರವರ ಕಾರ್ಯಾಲಯ - 587103

ದೂರವಾಣಿ : 08354-235925 Email : gmlaqukp@gmail.com

ನಂ:ಕಂಇ/ಭೂಸ್ವಾ-3/ಸಿಆರ್-95/2018-19 /1324 ದಿನಾಂಕ: 26 -12-2019.

ಇವರಿಗೆ,

ವಿಶೇಷ ಭೂಸ್ವಾಧೀನಾಧಿಕಾರಿ,
ಕೃ.ಮೇ.ಯೋ., ದೇವದುರ್ಗ
ಕ್ಯಾಂಪ್: ಚಿಕ್ಕಹೊನ್ನಕುಣಿ.

ಮಾನ್ಯರೇ,

ವಿಷಯ:- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013ರ ಕಲಂ 19(7) ರಡಿ ಅಧಿಸೂಚಿಸುವ ಅವಧಿ ವಿಸ್ತರಿಸುವ ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂ.ಎಲ್.ಎ.ಕ್ಯೂ/ಎಸ್.ಆರ್-12/2018-19, ದಿನಾಂಕ: 04-09-2019 (ಈ ಕಛೇರಿ ಸ್ವೀಕೃತಿ ದಿನಾಂಕ: 06-09-2019).

-000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಲಿಂಗಸೂರ ತಾಲೂಕಿನ **ಗೌಡೂರ** ಗ್ರಾಮದಲ್ಲಿ ನಾರಾಯಣಪೂರ ಬಲದಂಡೆ ವಿತರಣಾ ಕಾಲುವೆ ಸಂ.8(ಎ) ರ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಕುರಿತು (ನೀರಾವರಿ ಯೋಜನೆ) ಕಲಂ 11(1)ರ ಅಧಿಸೂಚನೆಯನ್ನು ದಿನಾಂಕ: 27-09-2018ರಂದು ಪ್ರಕಟಗೊಂಡಿದ್ದು ಕಲಂ 11(1)ರ ನಂತರ ಮುಂದಿನ ಪ್ರಕ್ರಿಯೆಗಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರವಸತಿ ಮತ್ತು ಪುನರವ್ಯವಸ್ಥೆಯ ಅಧಿನಿಯಮ 2013ರ ಭೂಸ್ವಾಧೀನ ಕಾಯ್ದೆ ಕಲಂ 19(7)ರಡಿಯಲ್ಲಿ 1 ವರ್ಷದವರೆಗೆ ಕಾಲಾವಧಿಯನ್ನು ವಿಸ್ತರಿಸಲು ಕೋರಿರುತ್ತೀರಿ.

ತಮ್ಮ ಪತ್ರದಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮತ್ತು ಈ ಯೋಜನೆಯು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವದರಿಂದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ 2013, ಕಲಂ 19(7)ರಡಿ (2ನೇ ವಿವರಣೆ) ಅಡಿಯಲ್ಲಿ ಸದರಿ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯ್ದೆಯ ಪ್ರಕಾರ ಸಂಪೂರ್ಣ ಪ್ರಕ್ರಿಯೆ ಪೂರ್ಣಗೊಳಿಸಿ ಅಧಿಸೂಚನೆಯಲ್ಲಿ ಮುಂದುವರೆಯಲು ದಿನಾಂಕ: 26-09-2020ರ ವರೆಗೆ ಅವಧಿ ವಿಸ್ತರಿಸಲಾಗಿದೆ. ಭೂಸ್ವಾಧೀನ ಕಾಯ್ದೆ ಕಲಂ 19(2)ರ (3ನೇ ವಿವರಣೆ) ರನ್ವಯ ಅಧಿಸೂಚನೆ ಹೊರಡಿಸಿ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

| |
|---|
| ಕಛೇರಿ ಟಿಪ್ಪಣಿ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ. |

ಆಯುಕ್ತರು,
ಪುಪು/ಭೂಸ್ವಾಧೀನ, ಕೃ.ಮೇ.ಯೋ.,
ನವನಗರ, ಬಾಗಲಕೋಟೆ.
ಇವರ ಪರವಾಗಿ.

ಪ್ರತಿಯನ್ನು:

1) ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ, ಕೃಮೇಯೋ, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.
2) ಪುನರವಸತಿ ಅಧಿಕಾರಿ, ಕೃಮೇಯೋ, ನಾರಾಯಣಪೂರ ಇವರಿಗೆ ಮಾಹಿತಿಗಾಗಿ.